ಅಂತ ಹುಡಿಕಂಡು ವೊಯ್ತಿದ್ದವ್ರುಗ ಏಟು. ಈಚ್ಗ ಬಂದವ್ರುಗೆಲ್ಲ ಏಟು. ವಿಚಾರಣೆ ಇಲ್ದೆಯಾ ರೋಡ್ ರೋಡಲ್ಲಿ ಶಿಕ್ಷೆ ಆಗ್ತಿತ್ತು. ಜನ ತಪ್ಪಿಸ್ಕಳ್ಳಾಕ, ಊರ್ ಸೇರ್ಕಳ್ಳಾಕಂತ ಲಾಟಿಗಳಿಲ್ಲದ ಬೀದಿಯ ಹುಡುಕ್ತಾ ಓಡ್ತವ್ರ. ಅಂಕಪ್ಪ ತನ್ನ ಫ್ರೆಂಡ್ಗಳ ಬುಟ್ಟಾಗಿತ್ತು. ಅವರು ಇವನ ಬುಟ್ಟು ನಡ್ದಿದ್ದರು. ಊರ್ಗ ಹೋಗೋದಿರ್ಲಿ ಪಕ್ಕದ ರೋಡಿಗ ಹೋಗೋದು ಕಷ್ಟ ಆಗಿತ್ತು. ಇಲ್ಲೇ ನಿಂತ್ರೂ ಏಟು ಬೀಳ್ತಿದ್ದವು. ಅವುಸ್ಗಂಡ್ ಅವುಸ್ಗಂಡು ಅಂಕಪ್ಪ ಮಯ್ಸೂರು ರೋಡಿಗ ಹೋಗ್ಬೇಕು ಅಂದ್ಕಂಡು ಯಾವ್ದೋ ಬೀದಿಗ ಬಂದು ಎತ್ತಗ ಹೋಗ್ಬೇಕು ಅಂತ ತಿಳಿದೆ ಕಡೆಗೆ ಮೆಟ್ರೋ ಕಂಡ ಕಡೆಗೆ ನಡೆದ. ನಾಕಾರು ಕಡೆ ಎಲ್ಡೇಟು ಬಿದ್ರೂವಿ ನಾಕೇಟು ತಪ್ಪಿಸ್ಕಂಡು ರಾಜ ರಾಜೇಶ್ವರಿ ನಗರ ಹತ್ತಿರ ಕಟ್ತಿರೋ ಮೆಟ್ರೋ ಸ್ಟೇಶನ್ನಲ್ಲಿ ಅವುಸ್ಕಂಡು ಕೂತ್ಗಳಾಕ ಹೋದ್ರ ಇವ್ನಂಗೆ ಅವುಸ್ಕಳ್ಳಾಕ ಬಂದವ್ರು ನೂರಾರ್ ಜನ ಅಲ್ಲಿದ್ರು. ಏನಾರ ಆಗ್ಲಿ ರಾತ್ರನಗ ಹೋಗೋದು ಅಂತ ಕೂತ್ಗಂಡ.

ತಲೆ ಎತ್ತಿ ನೋಡುದ್ರ ಅವರು ಎಸ್ದೋಗಿರೋ ತುಂಡು ಬಟ್ಟೆ ಕಾಣುಸ್ತು. 'ಇದೇನಿದು ಹಿಂಗಿದ್ದು! ಆಚೋರಿ ಇಚೋರಿ ದಾರ ಕಟ್ಟವ್ರ ನೀಲಿ ಬಣ್ಣಕ್ಕದ. ಇದ್ನ ಯಾನ್ ಮಾಡೋದು? ಯಾಕ ಎಸದ್ಬುಟ್ಟು ಹೋಗವ್ರ?' ಆ ನೀಲಿ ಬಣ್ಣದ ಬಟ್ಟೆ ನಾರಾಯ್ಣಿಗ ಒಂದ್ ಗಳುಗೆ ನೋವನ್ನ ಮರೆಸಿಬಿಟ್ಟಿತ್ತು. ತಿರ್ಗ ಆ ನೋವು ಕಾವ್ಲಿಲಿ ನೀರು ನುಗ್ಗಿದಂಗ ಒಂದ್ಕಡೆಯಿಂದ ದೇಹನೆಲ್ಲಾವಿ ಹಿಂಡುತ್ತಾ ಗುದ್ಗಂಡು ಬಂತು. ಆ ನೋವು ಜೊತ್ಗ ಲಾಟಿಯ ಭಯ ಒಟ್ಟಾಗಿ ಅವನನ್ನು ಹಟ್ಟಿಗ ತೆವಳಿಸಿಕೊಂಡು ಹೋಗ್ಬುಡ್ತು. ಅಂತೂ ಸೂರ್ಯ ಹೆಗ್ಗಳ್ಳಿಯ ಇಸ್ಕೂಲ್ಮನ್ತವು ಇಳಿದು ಹೋಗೋ ಟೇಮಿಗ ಹಟ್ಟಿ ಬಾಕ್ಲಲ್ಲಿದ್ದನು ನಾರಾಯ್ಣಿ. ಎಷ್ಟ್ ಕೂಗುದ್ರೂ ಹೆಡ್ತಿ ಲಶ್ಮಿ ಈಚ್ಗ ಕಡಿನಿಲ್ಲ. ಪಕ್ಕದ ಮಾದಪ್ಪನ ಹಟ್ಟಿಲೂವಿ ಯಾರದೂ ಸದ್ದಿಲ್ಲ. 'ಏನಾಗಿದ್ದು ಲೋಕಕ್ಕ?' ತನಗ ಬಿದ್ದಿರೋ ಏಟಿಗ, ಈ ಲೋಕ ಅಳ್ಳಾಡದೆ ಇರೋದಕ್ಕ ಏನೋ ಸಂಬಂಧ ಇದೆ ಅನ್ನುಸ್ತು ಅವ್ನಿಗ. ತಾನು ಹುಟ್ಟಿದ ಜಿನದಿಂದ ನೋಡ್ತವ್ನಿ ಜನ ಒಂದ್ಗಳ್ಗ ನಿಂತಲ್ಲಿ ನಿಂತಿಲ್ಲ. ಆದ್ರ ಇವತ್ತು! ಏನೋ ಕೇಡಾಗಿರ್ಬೌದು ಲೋಕಕ್ಕ. ಇಲ್ದಿದ್ರ ಹೀಂಗ...

'ಅನ್ನ ಉಂಡ್ರೆ?' ಲಶ್ಮಿದು ದನಿ ಆ ಗೌವ್ಗತ್ತಲನ್ನ ಕೂದು ಲೋಕದ ಚಿಂತೆಯ ಮೈಮೇಲ ಎಳಕಂಡು ಕಳದೋಗಿದ್ದ ನಾರಾಯ್ಣಿನ ನೋವಿನ ರಾಶಿಗ ತೂದು ಎಸದ್ಬುಟ್ಟಿತು. ಹೆಡ್ತಿಯ ನೋಡಿದ್ದೇ ಅವನ ಅಳು ಹೊಟ್ಟೆ ಒಳಗಿಂದ ಕಿತ್ಗಂಡು ಬಂತು. ಸುತ್ತೂರಿಗೆಲ್ಲ ಕೇಳುವಂಗ ದೊಡ್ಡ ಬಾಯಿ ತೆಗೆದು ಅತ್ತನು. "ನಾನು ಏನು ಮಾಡ್ದೆಯಾ ನನಗ ದನಕ್ಕ ಬಡಿದಂಗ ಬಡದ್ರು ಲಶ್ಮಿ. ಇಕಾ ನನ್ ಕಾಲು" ಅಂದ್ಕಂಡು ಹೆಡ್ತಿಗ ತೋರಿಸಿ ಅತ್ಬುಟ್ಟನು. ಗಂಡನ ನೋಡಿ ಅವಳಿಗೂ ಸ್ಯಾನೆ ದುಕ್ಕ ಆಗಿ ಇಬ್ರೂವಿ ಅದೆಷ್ಟೋ ಹೊತ್ತು ಅತ್ರು. ಗಂಡ ಹೆಡ್ತಿ ಅತ್ತಿದ್ದನ್ನ ಆ ಚಿಕ್ಕೂರು ಅವರಿಗೇ ಕೇಳಿಸ್ತು. ಅವರಿಗೆ ಅವರೇ ಸಮಾಧಾನ ಮಾಡ್ಕಂಡು...

ಲಶ್ಮಿ: ಊರಿಗ ಅದೇನೋ ಮಾರಿ ಬಂದಿದ್ದಂತ. ಮನಸ್ರು ಮನಸ್ರನ್ನ ಮುಟ್ಟಿದ್ರ ಬಡ್ಕಳತಂತ. ಅದ್ಕ ಯಾರೂವಿ ಹಟ್ಟಿಂದ ಈಚ್ಗ ಬರ್ಬಾರ್ದಂತ.

ನಾರಾಯ್ಣಿ: ಮಾರಿನಾ? ಯಾರಂದ್ರು?

ಲಶ್ಮಿ: ನಾ ಹೆಗ್ಗಳ್ಳಿಗ ವಾಗಿದ್ದಿ. ಅಲ್ಲೆಲ್ಲ ಮಾತಾಡ್ತಿದ್ರು. ಟಿವಿ ಪೇಪರಿನಾಗ ಬಂದಿತ್ತಂತ. ರೋಡಿಗ ಬಂದವ್ರುಗೆಲ್ಲ ಏಟು ಬಿದ್ದವ.

ನಾರಾಯ್ಣಿ : ಕಾಲು ಸ್ಯಾನೆ ನೋಯ್ತುದೆಕಾ ಲಶ್ಮಿ.

ಲಶ್ಮಿ: ಅವ್ರ್ ಕೈ ಸೇದೋಗ ಯಾಪಾಟಿ ಹೊಡ್ದವ್ರ ಮುಂಡೆಮಕ್ಳು !

ಆ ರಾತ್ರನಗ ಲಾಟಿಗಳ ಕುಲನೆಲ್ಲಾವಿ ಗುಡ್ಡೆ ಹಾಕಿ ಬೋದು ಲಶ್ಮಿ ತನ್ನ ಕೋಪನೆಲ್ಲಾವಿ ತೀರಿಸ್ಕಂಡಳು. ನಾರಾಯ್ಣಿ ಕಾಲಲ್ಲಿ ಹರಿದೂ ಹರಿದು ಸುಸ್ತಾಗಿ ಒಣಗಿದ್ದ ರಗುತವ ತನ್ನ ಸ್ಯಾಲ ಸೆರಗಿಂದ ಸೀಟುತ್ತಿದ್ದಳು. ಸೆರಗು ಲಶ್ಮಿಯ ಕಣ್ಣೀರಲ್ಲೇ ತ್ಯಾವ ಆಗಿತ್ತು. ಅದಕ್ಕೀಗ ನಾರಾಯ್ಣಿ ರಗುತವೂ ಸೇರ್ಕಂಡು ಭಾರವಾಯ್ತು. ಈ ಭಾರಕ್ಕ ಅವಳ ಕೋಪದ ಭಾರವು ಕಡ್ಮೇ ಆಯ್ತಾ ಗಂಡಗ ಹಿಟ್ಟುಣ್ಣಾಕ ಕೊಡ್ನಿಲ್ಲ ಅಂಬೋದು ಮನ್ಸಿಗ ಬಂದು ಅಡುಗಿ ಮಾಡಾಕ ಒಲ ಹತ್ಸಿದಳು. ಬಿಂಕಿ ಕಚ್ಗಳದು ಅದ್ಕ ಹೆಡ್ತಿ ಕಣ್ಣೀರು ಬಿದ್ದು ಆರೋಗದು ಈ ತರವಾಗಿ ಆಗೋದ್ನ ನೋಡಿ ನಾರಾಯ್ಣಿಗ ಹೊಟ್ಟೆ ಚುರ್ ಅಂತು.

'ಅಳ್ ಬ್ಯಾಡಕಾ ಲಶ್ಮಿ. ಒಪ್ಪೊತ್ನಗ ನೀ ಅನ್ನ ಉಂಡೆ?'

'ನಾ ಹೆಗ್ಗಳ್ಳೀಲಿ ಉಂಡ್ಕಂದೆಕನ, ವಸಿ ಇರು ಅಡ್ಗ ಮಾಡ್ತೀನಿ'